**JULY 15, 2024**

**AKASHAVANI - DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- ಇಂದಿನಿಂದ ದಿನಾಂಕ 26 ರ ವರೆಗೆ, ರಾಜ್ಯ ವಿಧಾನ ಮಂಡಲ ಅಧಿವೇಶನ.
- ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ವಿಚಾರ; ಸರ್ವಪಕ್ಷ ಸಭೆಯಲ್ಲಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲು, ತೀರ್ಮಾನ
- ನೂತನ ಕೇಂದ್ರ ಸರ್ಕಾರ, ಸಂವಿಧಾನ ಬಲಪಡಿಸಲು ಕಾರ್ಯೋನ್ಮುಖ – ರಾಮದಾಸ್ ಅಠವಳೆ.
- ನೀತಿ ಆಯೋಗದ, ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ, ಕರ್ನಾಟಕಕ್ಕೆ ಐದನೇ ಸ್ಥಾನ.
- ಇಂದು, ವಿಶ್ವ ಯುವ ಕೌಶಲ ದಿನಾಚರಣೆ.

<><><>

**ಈಗ ವಾರ್ತೆಗಳ ವಿವರ**

<><><>

ರಾಜ್ಯ ವಿಧಾನ ಮಂಡಲದ ಅಧಿವೇಶನ, ಇಂದಿನಿಂದ 26 ರ ವರೆಗೆ, 9 ದಿನಗಳ ಕಾಲ ನಡೆಯಲಿದೆ. ಇಂದು ಬೆಳಗ್ಗೆ 11 ಗಂಟೆಗೆ ಅಧಿವೇಶನ ಆರಂಭವಾಗಲಿದೆ ಎಂದು, ವಿಧಾನಸಭೆ ಸಚಿವಾಲಯ ತಿಳಿಸಿದೆ. ಇಂದಿನ ಕಲಾಪದಲ್ಲಿ ಅಗಲಿದ ಗಣ್ಯರಿಗೆ ಸಂತಾಪ ಸೂಚನೆ, ಬಳಿಕ 9 ದಿನಗಳ ಸದನ ಕಲಾಪದಲ್ಲಿ ಪ್ರಶ್ನೋತ್ತರ ಅವಧಿ, ಗಮನ ಸೆಳೆಯುವ ಸೂಚನೆ, ಶೂನ್ಯ ವೇಳೆ, ನಿಯಮ 69, ಖಾಸಗಿ ವಿಧೇಯಕಗಳು ಸೇರಿದಂತೆ, ಹಲವು ವಿಷಯಗಳ ಮೇಲೆ ಚರ್ಚೆ ನಡೆಯುವ ಸಾಧ್ಯತೆ ಇದೆ.

<><><>

ಅಧಿವೇಶನದ ಅವಧಿಯಲ್ಲಿ, ಗ್ರೇಟರ್ ಬೆಂಗಳೂರು, ಹೊರಗುತ್ತಿಗೆ ಮೀಸಲು, ಕನ್ನಡ ಭಾ ಾ ವಿಧೇಯಕಗಳನ್ನು ಮಂಡಿಸಲು ಸರ್ಕಾರ ಸಿದ್ಧತೆ ಕೈಗೊಂಡಿದೆ.

<><><>

ವಿಧಾನ ಪರಿಷತ್‌ನಲ್ಲಿ, ಚರ್ಚೆಗಾಗಿ ಈ ಬಾರಿ 854 ಪ್ರಶ್ನೆಗಳನ್ನು ಸ್ವೀಕರಿಸಲಾಗಿದೆ.

<><><>

ಇದೇ ವೇಳೆ ಮುಡಾ ವಿವಾದ, ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹು ಕೋಟಿ ಅವ್ಯವಹಾರ ಆರೋಪ ಸೇರಿದಂತೆ, ಹಲವು ಪ್ರಮುಖ ವಿ ’ಯಗಳನ್ನು ಚರ್ಚೆಗೆ ಕೈಗೆತ್ತಿಕೊಂಡು, ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಲು, ಪ್ರತಿಪಕ್ಷಗಳು ಸಜ್ಜುಗೊಂಡಿವೆ.

<><><>

ರಾಜ್ಯ ವಿಧಾನ ಮಂಡಲದ ಅಧಿವೇಶನ ಇಂದು ಆರಂಭವಾಗಲಿರುವ ಹಿನ್ನೆಲೆ, ಅಧಿವೇಶನಕ್ಕೆ ಪೂರ್ವಭಾವಿಯಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ಅಧಿವೇಶನದಲ್ಲಿ ಚರ್ಚೆಯಾಗುವ ವಿ ’ಯಗಳಿಗೆ ಸಮರ್ಪಕ ಉತ್ತರ ನೀಡಲು ಸಿದ್ಧರಾಗಿರುವಂತೆ ಹಾಗೂ ಅಧಿವೇಶನದಲ್ಲಿ ಖುದ್ದು ಹಾಜರಿದ್ದು, ಸಚಿವರಿಗೆ ತಮ್ಮ ತಮ್ಮ ಇಲಾಖೆಗಳ ವಿ ’ಯಗಳ ಕುರಿತು ಮಾಹಿತಿ ಒದಗಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

<><><>

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ – ಮುಡಾ ನಿವೇಶನ ಹಂಚಿಕೆಯಲ್ಲಿ, ಹಗರಣದ ಆರೋಪಗಳ ಹಿನ್ನೆಲೆ, ವಿಚಾರಣೆ ನಡೆಸಲು, ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಪಿ.ಎನ್. ದೇಸಾಯಿ ನೇತೃತ್ವದ ಏಕಸದಸ್ಯ ವಿಚಾರಣಾ ಆಯೋಗ ರಚನೆ ಮಾಡಿ, ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

<><><>

ಜುಲೈ 31ರ ವರೆಗೆ ತಮಿಳುನಾಡಿಗೆ ನಿತ್ಯ 1 ಟಿ.ಎಂ.ಸಿ. ನೀರು ಹರಿಸಬೇಕೆಂಬ ಕಾವೇರಿ ನೀರು ನಿಯಂತ್ರಣಾ ಸಮಿತಿ ಸೂಚನೆಯನ್ನು, ಸರ್ವಪಕ್ಷ ಸಭೆಯಲ್ಲಿ ತಿರಸ್ಕರಿಸಲಾಯಿತು. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಸರ್ವಪಕ್ಷಗಳ ಮುಖಂಡರ ಸಭೆ ಜರುಗಿತು. ಶಿಫಾರಸು ಕುರಿತು ಮರು ಪರಿಶೀಲನೆ ನಡೆಸುವಂತೆ, ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಲಾಗಿದೆ. ಕಾವೇರಿ ತಾಂತ್ರಿಕ ಸಮಿತಿ, ಕಾವೇರಿ ಕೊಳ್ಳದ 4 ಜಲಾಶಯಗಳಲ್ಲಿ ನೀರಿನ ಸಂಗ್ರಹ, ಒಳ ಹರಿವು, ಮಳೆಯ ಪ್ರಮಾಣದ ಕುರಿತ ವರದಿ ನೀಡಿತು. ವರದಿ ಆಧರಿಸಿ ಸರ್ವಪಕ್ಷಗಳೊಂದಿಗೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಕರ್ನಾಟಕದ ಪರ ಜಲ ವಿವಾದ ಪರಿಣಿತ ಹಿರಿಯ ವಕೀಲ ಮೋಹನ್ ಕಾತರಕಿ, ಕಾವೇರಿ ಜಲಾನಯನ ಪ್ರದೇಶದ ಶಾಸಕರು, ವಿಧಾನಪರಿ ’ತ್ ಸದಸ್ಯರು ಹಾಗೂ ಅಧಿಕಾರಿಗಳು ಭಾಗವಹಿಸಿದ್ದರು.

<><><>

ನೂತನ ಕೇಂದ್ರ ಸರ್ಕಾರ, ಸಂವಿಧಾನ ಬಲಪಡಿಸಲು ಕಾರ್ಯೋನ್ಮುಖವಾಗಿದೆ ಎಂದು, ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ, ರಾಜ್ಯ ಖಾತೆ ಸಚಿವ ರಾಮದಾಸ್ ಅಠವಳೆ ಹೇಳಿದ್ದಾರೆ. ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲೂಕಿನ ಮಲ್ಲಗಾನಹಳ್ಳಿಯಲ್ಲಿ ಡಾಕ್ಟರ್ ಬಿ. ಆರ್.ಅಂಬೇಡ್ಕರ್ ಹಾಗೂ ರಾಜರ್ಷಿ ನಾಲ್ವಡಿ ಕೃ ್ಣರಾಜ ಒಡೆಯರ್ ಅವರ ಪುತ್ಥಳಿ ಅನಾವರಣ ಮಾಡಿ, ಅವರು ಮಾತನಾಡಿದರು.

<><><>

ವಚನ ಪಿತಾಮಹ ಫ.ಗು.ಹಳಕಟ್ಟಿ ಅವರು, ತಮ್ಮ ಬಾಲ್ಯವನ್ನು ಕಳೆದ, ಧಾರವಾಡದ ಮನೆಯನ್ನು, ಸಾಂಸ್ಕೃತಿಕ ಸ್ಮಾರಕವನ್ನಾಗಿಸುವ ಚಿಂತನೆ ನಡೆದಿದೆ ಎಂದು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ. ಜಾಗತಿಕ

ಲಿಂಗಾಯತ ಮಹಾಸಭಾ, ಮೈಸೂರಿನಲ್ಲಿ ಆಯೋಜಿಸಿದ್ದ, ಶರಣ ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರ, ಜನ್ಮ ಶತಮಾನೋತ್ಸವ ಹಾಗೂ ವಚನ ಸಂಪುಟಗಳ ಶತಮಾನೋತ್ಸವ ಸಮಾರಂಭದಲ್ಲಿ, ಅವರು ಮಾತನಾಡಿದರು. ಧಾರವಾಡದಲ್ಲಿ ಅವರ ನಿವಾಸದ ಸಮೀಪವಿರುವ ವೃತ್ತಕ್ಕೆ, ಫ.ಗು. ಹಳಕಟ್ಟಿ ಅವರ ಹೆಸರು ನಾಮಾಂಕಿತ ಗೊಳಿಸುವುದು; ಕಂಚಿನ ಪ್ರತಿಮೆ ಅನಾವರಣಗೊಳಿಸಲು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗೆ, ಮನವಿ ಸಲ್ಲಿಸಲಾಗುವುದು ಎಂದು, ಅವರು ಹೇಳಿದರು.

<><><>

ಬೆಳಗಾವಿ ಜಿಲ್ಲೆ ರಾಮದುರ್ಗ ತಾಲೂಕು, ಕಟಕೋಳ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ ಚಿತ್ರಕಲಾ ಶಿಕ್ಷಕ ಸುನಿಲ್ ಮಠದ ಅವರು, ಮುಂಬೈಯ ಪ್ರತಿಷ್ಠಿತ ಜಹಾಂಗೀರ ಆರ್ಟ್ ಗ್ಯಾಲರಿಯಲ್ಲಿ, 7 ದಿನಗಳ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶಿನಿ ಏರ್ಪಡಿಸಿ, ಗಮನ ಸೆಳೆದಿದ್ದಾರೆ. ಹಳ್ಳಿ ಬದುಕು ಹಾಗೂ ಗ್ರಾಮೀಣ ಸೊಗಡನ್ನು ಆ್ಯಕ್ರಿಲಿಕ್ ಮಾಧ್ಯಮದಲ್ಲಿ ಚಿತ್ರಿಸಿ, ಮಠದ ಮೇಷ್ಟ್ರು ಪ್ರಶಂಸೆ ಗಳಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಕಲಾವಿದ, ಸುನಿಲ್ ಮಠದ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಸುನಿಲ್ ಮಠದ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ನೀತಿ ಆಯೋಗ ಪ್ರಕಟಿಸಿದ, 2023–24 ನೇ ಆರ್ಥಿಕ ವರ್ಷದ 'ಸುಸ್ಥಿರ ಅಭಿವೃದ್ಧಿ ಗುರಿ ಭಾರತದ ಸೂಚ್ಯಂಕ'ದಲ್ಲಿ, 75 ಅಂಕ ಪಡೆದಿರುವ ಕರ್ನಾಟಕ, ಐದನೇ ಸ್ಥಾನ ಗಳಿಸಿದೆ. ಉತ್ತರಾಖಂಡ ಮತ್ತು ಕೇರಳ ರಾಜ್ಯಗಳು ಅತ್ಯುತ್ತಮ ಸಾಧನೆಯ ರಾಜ್ಯಗಳೆಂಬ ಶ್ರೇಯಸ್ಸಿಗೆ ಭಾಜನವಾಗಿದ್ದು, ಜಂಟಿಯಾಗಿ ಅಗ್ರಸ್ಥಾನ ಹಂಚಿಕೊಂಡಿವೆ. ಸುಸ್ಥಿರ ಅಭಿವೃದ್ಧಿಗೆ ಗುರಿ ಸಾಧನೆಗಾಗಿ, 16 ಗುರಿಗಳನ್ನು ನಿಗದಿಪಡಿಸಲಾಗಿದ್ದು, ಇವುಗಳ ಸುಧಾರಣೆಗೆ ಕೇಂದ್ರ ಸರ್ಕಾರ ನೆರವು ನೀಡಿದೆ ಎಂದು, ನೀತಿ ಆಯೋಗದ ಸಿ.ಇ.ಓ. ಬಿ.ವಿ.ಆರ್.ಸುಬ್ರಹ್ಮಣ್ಯಂ ತಿಳಿಸಿದ್ದಾರೆ. ಬಡತನ ನಿರ್ಮೂಲನೆ, ಆರ್ಥಿಕತೆ ಬೆಳವಣಿಗೆ, ಹವಾಮಾನ ಬದಲಾವಣೆ ನಿಯಂತ್ರಣ ಮತ್ತು ಪರಿಸರ ಸಂರಕ್ಷಣೆ ಸಂಬಂಧ ರೂಪಿಸಿರುವ ಕ್ರಮಗಳಿಂದಾಗಿ, ಈ ಬೆಳವಣಿಗೆ ಸಾಧ್ಯವಾಗಿದೆ ಎಂದು, ನೀತಿ ಆಯೋಗದ ವರದಿ ತಿಳಿಸಿದೆ.

<><><>

'ಶಾಂತಿ ಮತ್ತು ಸಮೃದ್ಧಿಗಾಗಿ ಯುವ ಕೌಶಲಗಳು' ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ಯುವ ಕೌಶಲ ದಿನಾಚರಣೆ ಆಚರಿಸಲಾಗುತ್ತಿದೆ. ವಿಶ್ವ ಸಂಸ್ಥೆ ಮಾನ್ಯತೆ ಪಡೆದ ಈ ದಿನಾಚರಣೆ, 2014 ರಿಂದ ಪ್ರತಿ ವರ್ಷ ಜುಲೈ 15 ರಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಚರಿಸಲ್ಪಡುತ್ತದೆ. ಯುವಜನತೆ ತಮ್ಮ ಆಯ್ಕೆಯ ಕ್ಷೇತ್ರಗಳಲ್ಲಿ ಉದ್ಯೋಗ, ಗೌರವಯುತ ವೃತ್ತಿ ನಿರ್ವಹಣೆ ಹಾಗೂ ಸ್ವಂತದ ಉದ್ದಿಮೆಗಳನ್ನು ಪ್ರಾರಂಭಿಸಿ, ಸ್ವಾವಲಂಬಿಯಾಗಿ ಇತರರಿಗೆ ಉದ್ಯೋಗ ಕಲ್ಪಿಸುವ ಕೌಶಲಗಳನ್ನು ಕರಗತ ಮಾಡಿಕೊಳ್ಳುವಂತೆ, ವಿಶ್ವ ಯುವ ಕೌಶಲ ದಿನ ಪ್ರೇರೇಪಿಸುತ್ತದೆ.

<><><>

ಹುಬ್ಬಳ್ಳಿಯ ಶುಭಾಂಗಿ ಅಕಾದೆಮಿ ಆಫ್ ಮ್ಯೂಸಿಕ್ ಸಂಸ್ಥೆಯ ವಿದ್ಯಾರ್ಥಿನಿ, ಶಿವಾನಿ ರವೀಂದ್ರ ಕವಠೇಕರ, ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯ ನೀಡುವ, ಕಲ್ಚರಲ್ ಟ್ಯಾಲೆಂಟ್ ಸರ್ಚ್ ಸ್ಕಾಲರಶಿಪ್ ಸ್ಕೀಮ್ – ಸಿ.ಸಿ.ಆರ್.ಟಿ. ಶಿಷ್ಯ ವೇತನಕ್ಕೆ ಆಯ್ಕೆಯಾಗಿದ್ದಾರೆ. ಹುಬ್ಬಳ್ಳಿಯ ರಾಜನಗರದ ಪಿ.ಎಂ.ಶ್ರೀ. ಕೇಂದ್ರೀಯ ವಿದ್ಯಾಲಯದ 10ನೇ ತರಗತಿಯ ವಿದ್ಯಾರ್ಥಿನಿ ಶಿವಾನಿ, ಕಿರಾನಾ ಘರಾಣೆಯ ವಿದುಷಿ ಶುಭಾಂಗಿ ಜಾಧವ ಅವರ ಶಿಷ್ಯೆಯಾಗಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಶಿವಾನಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಶಿವಾನಿ ರವೀಂದ್ರ ಕವತೇಕರ್ ಧ್ವನಿ 45 ಸೆಕೆಂದುಗಳು

<><><>

ಅಂತಾರಾಷ್ಟ್ರೀಯ ಪ್ಲಾಸ್ಟಿಕ್ ಸರ್ಜರಿ ದಿನಾಚರಣೆ ಅಂಗವಾಗಿ ಇಂದು, ಧಾರವಾಡದ, ಸತ್ತೂರಿನ ಎಸ್.ಡಿ.ಎಂ. ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ, ಸುರೂಪಿ ಚಿಕಿತ್ಸೆ, ಪ್ಲಾಸ್ಟಿಕ್ ಸರ್ಜರಿ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ. ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊಫೆಸರ್ ನಿರಂಜನ ಕುಮಾರ್, ಮಾಹಿತಿ ನೀಡಿ, ಪ್ಲಾಸ್ಟಿಕ್ ಸರ್ಜರಿ ದುಬಾರಿ ಹಾಗೂ ಸರ್ಜರಿಗೆ ಪ್ಲಾಸ್ಟಿಕ್ ಬಳಸುತ್ತಾರೆ ಎಂದು ಸಾರ್ವಜನಿಕರಲ್ಲಿ ತಪ್ಪು ಕಲ್ಪನೆ ಇದೆ. ಪ್ಲಾಸ್ಟಿಕ್ ಸರ್ಜರಿ ಎಂದರೆ ಆಕಾರವನ್ನು ಮೂಡಿಸುವುದು. ಪ್ಲಾಸ್ಟಿಕ್‌ಗೂ ಈ ಚಿಕಿತ್ಸೆಗೂ ಸಂಬಂಧವಿಲ್ಲ ಎಂದರು.

<><><>

ಮಹಾರಾಷ್ಟ್ರ ಪಂಢರಪುರದ, ಚಂದ್ರಭಾಗಾ-ಭೀಮಾ ನದಿ ತಟದಲ್ಲಿರುವ, ಪುರಾಣ ಪ್ರಸಿದ್ಧ ವಿಠ್ಠಲನ ಸನ್ನಿಧಿಯಲ್ಲಿ, ಈಗ ಭಕ್ತಿಯ ಹೊಳೆ ಹರಿಯುತ್ತಿದೆ. ಆಷಾಢ ಏಕಾದಶಿ ಪ್ರಯುಕ್ತ ನಾಡಿದ್ದು, 17 ರಂದು, 15 ಲಕ್ಷಕ್ಕೂ ಅಧಿಕ ಭಕ್ತರು ವಿಠ್ಠಲ ರುಕ್ಮಿಣಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ ಎಂದು, ಮಂದಿರ ಸಮಿತಿಯ ಟ್ರಸ್ಟಿ ಜ್ಞಾನೇಶ್ವರ ಜಳಗಾಂವಕರ ತಿಳಿಸಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶ ಮತ್ತು ತೆಲಂಗಾಣದಿಂದ ಲಕ್ಷಾಂತರ ಭಕ್ತರು ಪಂಢರಪುರಕ್ಕೆ ಕಾಲ್ನಡಿಗೆಯಲ್ಲಿ ಪ್ರಯಾಣ ಆರಂಭಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಇಂದಿನಿಂದ ದಿನಾಂಕ 26 ರ ವರೆಗೆ, ರಾಜ್ಯ ವಿಧಾನ ಮಂಡಲ ಅಧಿವೇಶನ.
- ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ವಿಚಾರ: ಸರ್ವಪಕ್ಷ ಸಭೆಯಲ್ಲಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲು, ತೀರ್ಮಾನ
- ನೂತನ ಕೇಂದ್ರ ಸರ್ಕಾರ, ಸಂವಿಧಾನ ಬಲಪಡಿಸಲು ಕಾರ್ಯೋನ್ಮುಖ – ರಾಮದಾಸ್ ಅಠವಳೆ.
- ನೀತಿ ಆಯೋಗದ, ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ, ಕರ್ನಾಟಕಕ್ಕೆ ಐದನೇ ಸ್ಥಾನ.
- ಇಂದು, ವಿಶ್ವ ಯುವ ಕೌಶಲ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ